2019 ಕ.ತೀ.ವ 1304

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಜಿ.ಎಮ್. ಪಾಟೀಲ್

ಇಮ್ರಾನ್ ಖಾನ್ @ ಇಮ್ರಾನ್ ಪಾಷಾ ಮತ್ತು ಇನ್ನೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ (ಸಂಪಿಗೆ ಹಳ್ಳಿ ಪೊಲೀಸ್ ಠಾಣೆ), ಬೆಂಗಳೂರು*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ

ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್, ಬೆಂಗಳೂರು ಇವರ ಕಡತದಲ್ಲಿ, ಸಂಪಿಗೆ ಹಳ್ಳಿ ಪೊಲೀಸ್ ಠಾಣೆಯ ಕ್ರಿಮಿನಲ್ ಸಂಖ್ಯೆ: 280/2013ರಲ್ಲಿ ಹೊರಡಿಸಿದ ದಿನಾಂಕ: 28.10.2013ರ ಆದೇಶವನ್ನು ರದ್ದುಗೊಳಿಸಲು ಕೋರಿ ಈ ಕ್ರಿಮಿನಲ್ ಅರ್ಜಿಯನ್ನು ಸಲ್ಲಿಸಲಾಗಿದೆ.

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಮತ್ತು ಪ್ರತ್ಯರ್ಜಿದಾರರ ಪರ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು.

ಅರ್ಜಿದಾರರನ್ನು ಪೊಲೀಸ್ ಅಭಿರಕ್ಷೆಗೆ ಕಳುಹಿಸಿ ಮಾನ್ಯ ಮ್ಯಾಜಿಸ್ಟ್ರೇಟರು ಹೊರಡಿಸಿದ ದಿನಾಂಕ: 28.10.2013ರ ಆದೇಶವು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973ರ 167ನೇ ಪ್ರಕರಣದ ಉಲ್ಲಂಘನೆಯಾಗಿದ್ದು, ಸದರಿ ಆದೇಶವನ್ನು ರದ್ದುಗೊಳಿಸಬೇಕೆಂಬುದು ಅರ್ಜಿದಾರರ ಅಹವಾಲಾಗಿದೆ.

ಇದು ನಿರರ್ಥಕವಾಗಿದೆ ಮತ್ತು ಸದರಿ ಆದೇಶವನ್ನು ರದ್ದುಗೊಳಿಸುವುದರಲ್ಲಿ ಯಾವುದೇ ಅರ್ಥವಿಲ್ಲವೆಂದು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು ನಿವೇದಿಸಿಕೊಂಡಿದ್ದಾರೆ.

*ಕ್ರಿಮಿನಲ್ ಅರ್ಜಿ ಸಂಖ್ಯೆ: 7038/2013, ದಿನಾಂಕ 10ನೇ ಡಿಸೆಂಬರ್, 2018.

**ಈರ್ವರು ಪಕ್ಷಕಾರರ ವಾದಗಳನ್ನು ಆಲಿಸಿ, ತಮ್ಮ ವಾದದ ಸಮರ್ಥನೆಗೆ ಅವರು ಉಲ್ಲೇಖಿಸಿದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೊಕದ್ದಮೆಗಳನ್ನು ಪರಿಗಣಿಸಿ, ಈ ನ್ಯಾಯಾಲಯವು ಅರ್ಜಿಗೆ ಅನುಮತಿ ನೀಡಿದೆ ಮತ್ತು ಬೆಂಗಳೂರಿನ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ ಕಡತದಲ್ಲಿ, ಸಂಪಿಗೆ ಹಳ್ಳಿ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 280/2013ರ ಸಂಬಂಧದಲ್ಲಿ ಹೊರಡಿಸಿದ ದಿನಾಂಕ: 28.10.2013ರ ಪ್ರಶ್ನಿತ ಆದೇಶವನ್ನು ರದ್ದುಗೊಳಿಸಿದೆ.**

**ಅರ್ಜಿಯನ್ನು ಅನುಮತಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಜೆಟಿ 2000 (8) ಎಸ್‌ಸಿ 511*
*ಬುಧ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ (ಉಲ್ಲೇ) 5*

*2. (1992) 3 ಸರ್ವೋಚ್ಚ ನ್ಯಾಯಾಲಯ ಮೊಕದ್ದಮೆಗಳು 141*
*ಕೇಂದ್ರ ತನಿಖಾ ಸಂಸ್ಥೆ, ವಿಶೇಷ ತನಿಖಾ ಕೋಶ–I,*
*ನವ ದೆಹಲಿ –ವಿರುದ್ಧ– ಅನುಪಮ್ ಜೆ. ಕುಲಕರ್ಣಿ (ಉಲ್ಲೇ) 5*

ಅರ್ಜಿದಾರರ ಪರ : ಶ್ರೀ ಯೂನಸ್ ಅಲಿ ಖಾನ್, ನ್ಯಾಯವಾದಿ ಪರವಾಗಿ ಶ್ರೀ ಅನೀಸ್ ಅಲಿ ಖಾನ್, ನ್ಯಾಯವಾದಿ.

ಪ್ರತ್ಯರ್ಜಿದಾರರ ಪರ : ಶ್ರೀ ಎಸ್. ರಾಚಯ್ಯ, ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿ

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಪಿ.ಬಿ.ಎಮ್. ಪಾಟೀಲ್:**

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಮತ್ತು ಪ್ರತ್ಯರ್ಜಿದಾರರ ಪರ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು.

2. ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್, ಬೆಂಗಳೂರು ಇವರ ಕಡತದಲ್ಲಿ, ಸಂಪಿಗೆ ಹಳ್ಳಿ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 280/2013ರಲ್ಲಿ ಹೊರಡಿಸಿದ ದಿನಾಂಕ: 28.10.2013ರ ಆದೇಶವನ್ನು ರದ್ದುಗೊಳಿಸಲು ಕೋರಿ ಈ ಕ್ರಿಮಿನಲ್ ಅರ್ಜಿಯನ್ನು ಸಲ್ಲಿಸಲಾಗಿದೆ.

3. ಅರ್ಜಿದಾರರು ತಲೆಮರೆಸಿಕೊಂಡಿರುವರೆಂದು ತೋರಿಸಿ, ದಿನಾಂಕ: 13.09.2013ರಂದು ಅರ್ಜಿದಾರರು ಮತ್ತು ಇತರರ ವಿರುದ್ಧ ಭಾರತ ದಂಡ ಸಂಹಿತೆಯ 399ನೇ ಮತ್ತು 402ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಅಪರಾಧ ಸಂಖ್ಯೆ: 280/2013ರಲ್ಲಿ ಪ್ರತ್ಯರ್ಜಿದಾರ/ ಪೊಲೀಸರು ಸ್ವಯಂಪ್ರೇರಿತವಾಗಿ ಈ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ ಎಂಬುದು ಅರ್ಜಿದಾರರ ಮೊಕದ್ದಮೆಯಾಗಿದೆ. ಅವರು ತಮ್ಮ ದೂರಿನಲ್ಲಿ, ದಿನಾಂಕ: 13.09.2013ರಂದು ಸುಮಾರು ಪೂರ್ವಾಹ್ನ 11.20 ಗಂಟೆಗೆ, ನಾಗವಾರ ಸರ್ವೀಸ್ ರಸ್ತೆಯಲ್ಲಿ 3 ಕಾರುಗಳನ್ನು ನಿಲ್ಲಿಸಲಾಗಿದೆ ಎಂದು ಮತ್ತು ಅದರಲ್ಲಿನ ವ್ಯಕ್ತಿಗಳು ಡಕಾಯಿತಿ ನಡೆಸಲು ಯೋಜಿಸುತ್ತಿದ್ದಾರೆಂದು ಅವರಿಗೆ ಮಾಹಿತಿ ದೊರೆಯಿತು; ಮಾಹಿತಿ ದೊರೆತ ನಂತರ, ಪೊಲೀಸ್ ಅಧಿಕಾರಿಯು ತನ್ನ ತಂಡದೊಂದಿಗೆ ಮತ್ತು ಪಂಚರೊಂದಿಗೆ ಸುಮಾರು ಪೂರ್ವಾಹ್ನ 11.50 ಗಂಟೆಗೆ ಸ್ಥಳವನ್ನು ತಲುಪಿ, ಅವರ ವಾಹನಗಳನ್ನು ದೂರದಲ್ಲಿ ನಿಲ್ಲಿಸಿದರು ಮತ್ತು ಷಾವರ್‌ಲೆಟ್ ಕ್ಯಾಪ್ಟಿವಾ ಕಾರಿನ ಬಳಿ ಹೋದರು ಮತ್ತು ಚಾಲಕನ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿಯು ಕಬ್ಬಿಣ ತುಂಬಿದ ಲಾರಿ ಬರುತ್ತಿದ್ದು, ಅವರು ಚಾಲಕನನ್ನು ಕಟ್ಟಿ ಹಾಕಿ ಲಾರಿಯನ್ನು ತೆಗೆದುಕೊಳ್ಳುವ ಕುರಿತು ಮಾತನಾಡುತ್ತಿದ್ದುದನ್ನು ಕೇಳಿಸಿಕೊಂಡರು; ತರುವಾಯ, ಪೊಲೀಸ್ ಅಧಿಕಾರಿಯು ಸ್ವತಃ ಮತ್ತು ತನ್ನ ಸಿಬ್ಬಂದಿಯೊಂದಿಗೆ 4 ವ್ಯಕ್ತಿಗಳನ್ನು ದಸ್ತಗಿರಿ ಮಾಡಿದರು, ಅವರ ಪೈಕಿ ಮೂವರು ಓಡಿ ಹೋದರು; ಪೊಲೀಸ್ ಅಧಿಕಾರಿಯು – 1) ಫಯಾಜ಼್. ತಂದೆ: ಅಬ್ದುಲ್ ಸಮದ್, 2) ಜಾವೀದ್ ತಂದೆ: ಮೆಹಬೂಬ್ ಖಾನ್, 3) ಸಲೀಮ್ ಅಲಿಯಾಸ್ ಇಟ್ಟು, 4) ಸುಹೈಲ್ ತಂದೆ: ಅಲ್ಲಾಭಕ್ಸ್ ಇವರನ್ನು ದಸ್ತಗಿರಿ ಮಾಡಿದ್ದಾರೆ ಮತ್ತು 2 ಚಾಕುಗಳು, 1 ಲಾಂಗ್, 2 ಮಚ್ಚುಗಳು, 2 ಮರದ ದೊಣ್ಣೆಗಳು, ಒಂದು ಷೆವರ್‌ಲೆಟ್

ಕ್ಯಾಪ್ಟಿವಾ ಕಾರು, ಒಂದು ಮಹಿಂದ್ರಾ ಸ್ಕಾರ್ಪಿಯೋ ಹಾಗೂ ಒಂದು ಮಾರುತಿ ಓಮ್ನಿ ಕಾರುಗಳನ್ನು ಜಪ್ತಿ ಮಾಡಿದ್ದಾರೆ. ಅದರ ಆಧಾರದ ಮೇಲೆ, ಅವರು ಆ ನಾಲ್ವರು ವ್ಯಕ್ತಿಗಳ ಮೇಲೆ ಮತ್ತು ಸ್ಥಳದಿಂದ ಓಡಿ ಹೋದ ಮೂವರು ವ್ಯಕ್ತಿಗಳ ಮೇಲೆ ಪ್ರಕರಣವನ್ನು ಸಹ ದಾಖಲಿಸಿದ್ದಾರೆ.

4. ಇದಲ್ಲದೆ, ಅರ್ಜಿದಾರರನ್ನು ದಸ್ತಗಿರಿ ಮಾಡಲು ಮತ್ತು ಅವರನ್ನು ನ್ಯಾಯಿಕ ಅಭಿರಕ್ಷೆಗೆ ಪುನಃ ಕಳುಹಿಸಲು ಪ್ರತ್ಯರ್ಜಿದಾರ ಪೊಲೀಸರು ತೀವ್ರ ಪ್ರಯತ್ನಗಳನ್ನು ಮಾಡುತ್ತಿದ್ದುದ್ದರಿಂದಾಗಿ, ದಿನಾಂಕ: 21.09.2013ರಂದು ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ ಮುಂದೆ ಅವರು ಶರಣಾಗಿರುವರೆಂದು ಹೇಳಿದ್ದಾರೆ. ತರುವಾಯ, ದಿನಾಂಕ: 26.10.2013ರಂದು, ಪ್ರತ್ಯರ್ಜಿದಾರರು/ಪೊಲೀಸರು, ಪ್ರಕರಣದಲ್ಲಿ ಆರೋಪಿ ಸಂಖ್ಯೆ: 5 ಮತ್ತು 7 ಎಂದು ತೋರಿಸಿದ ಅರ್ಜಿದಾರರನ್ನು ಪೊಲೀಸ್ ಅಭಿರಕ್ಷೆಗೆ ನೀಡುವ ಸಂಬಂಧದಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರನ್ನು ಕೋರಿದ್ದು, ತದನುಸಾರವಾಗಿ, ಮಾನ್ಯ ಮ್ಯಾಜಿಸ್ಟ್ರೇಟರು, ದಿನಾಂಕ: 28.10.2013ರಂದು ನ್ಯಾಯಿಕ ಅಭಿರಕ್ಷೆಯಿಂದ ಅರ್ಜಿದಾರರನ್ನು ಪಡೆದು, ದಿನಾಂಕ: 30.10.2013ರವರೆಗೆ ಅವರನ್ನು ಪೊಲೀಸ್ ಅಭಿರಕ್ಷೆಗೆ ನೀಡಿದ್ದಾರೆ. ದಿನಾಂಕ: 28.10.2013ರ ಮಾನ್ಯ ಮ್ಯಾಜಿಸ್ಟ್ರೇಟರ ಈ ಆದೇಶವನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ ಮತ್ತು ಅರ್ಜಿದಾರರು ದಿನಾಂಕ: 28.10.2013ರ ಆದೇಶವನ್ನು ರದ್ದುಗೊಳಿಸುವ ಪರಿಹಾರವನ್ನು ಕೋರಿದ್ದಾರೆ.

5. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ***ಬುಧ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ***[1] ಈ ಮೊಕದ್ದಮೆಯಲ್ಲಿನ ತೀರ್ಪನ್ನು ಅವಲಂಬಿಸಿ, ಪ್ರಸ್ತುತ ಅರ್ಜಿಯಲ್ಲಿ ಪ್ರಶ್ನಿಸಿದ ದಿನಾಂಕ: 28.10.2013ರ ಆದೇಶವನ್ನು ಕಾನೂನಿನಲ್ಲಿ ಸ್ಥಿರೀಕರಿಸಲಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ ಮತ್ತು ಅವರು ***ಕೇಂದ್ರ ತನಿಖಾ ಸಂಸ್ಥೆ, ವಿಶೇಷ ತನಿಖಾ ಕೋಶ–I, ನವ ದೆಹಲಿ –ವಿರುದ್ಧ– ಅನುಪಮ್ ಜೆ. ಕುಲಕರ್ಣಿ***[2] ಈ ಮೊಕದ್ದಮೆಯ ನಿರ್ಣಯವನ್ನು ಸಹ ಅವಲಂಬಿಸಿದ್ದಾರೆ.

1. ಜೆಟಿ 2000 (8) ಎಸ್‌ಸಿ 511
2. (1992) 3 ಸರ್ವೋಚ್ಚ ನ್ಯಾಯಾಲಯ ಮೊಕದ್ದಮೆಗಳು 141

6. ಇದಕ್ಕೆ ತದ್ವಿರುದ್ಧವಾಗಿ, ಕೋರಿರುವ ಪರಿಹಾರವು ನಿರರ್ಥಕವಾಗಿರುವುದರಿಂದ, ರದ್ದುಗೊಳಿಸಬೇಕೆಂದು ಕೋರಲಾಗಿರುವ ದಿನಾಂಕ: 28.10.2013ರ ಆದೇಶವನ್ನು ಈ ಹಂತದಲ್ಲಿ ಪರಿಗಣಿಸಲಾಗುವುದಿಲ್ಲ ಎಂದು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು ನಿವೇದಿಸಿಕೊಂಡಿದ್ದಾರೆ.

7. ಮೇಲೆ ಉಲ್ಲೇಖಿಸಿದ ***ಬುಧ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ*** ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ತೀರ್ಪು ನೀಡಿದೆ:–

> "ಈ ಮೊಕದ್ದಮೆಯಲ್ಲಿ, ಆ 15 ದಿನಗಳ ಅವಧಿಯು ಒಪ್ಪಿಕೊಂಡಿರುವಂತೆ ದಿನಾಂಕ: 4.1.2000ರಂದು ಕೊನೆಗೊಂಡಿದೆ. ಮೊದಲ ಹದಿನೈದು ದಿನಗಳ ಅವಧಿ ಕೊನೆಗೊಂಡ ನಂತರ, ಏಳು ದಿನಗಳ ಅವಧಿಗಾಗಿ ಪೊಲೀಸ್ ವಶಕ್ಕೆ ನೀಡಲು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣವು ಅಧಿಕಾರ ನೀಡುವುದರಿಂದ, ಉಚ್ಚ ನ್ಯಾಯಾಲಯದ ಪ್ರಶ್ನಿತ ಆದೇಶವು ಆ ಪ್ರಕರಣವು ಒಳಗೊಂಡಿರುವ ಶಾಸನಾತ್ಮಕ ಉಪಬಂಧಗಳನ್ನು ಉಲ್ಲಂಘಿಸುತ್ತದೆ. **ಕೇಂದ್ರ ತನಿಖಾ ಸಂಸ್ಥೆ, ವಿಶೇಷ ತನಿಖಾ ಕೋಶ–I, ನವ ದೆಹಲಿ –ವಿರುದ್ಧ– ಅನುಪಮ್ ಜೆ. ಕುಲಕರ್ಣಿ (ಜೆಟಿ 1992) (3) ಎಸ್‌ಸಿ 366 = 1992 (3) ಎಸ್‌ಸಿಸಿ 141** ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣದ ಪರಿಧಿ ಮತ್ತು ವ್ಯಾಪ್ತಿಯನ್ನು ಪರಿಗಣಿಸಿ, ತರುವಾಯದ ಹಂತದಲ್ಲಿ ಒಂದೇ ವ್ಯವಹರಣೆಯಲ್ಲಿ ಆರೋಪಿಯು ಇನ್ನೂ ಹೆಚ್ಚಿನ ಅಪರಾಧಗಳನ್ನು, ಅವು ಗಂಭೀರವಾಗಿರಲಿ ಅಥವಾ ಇಲ್ಲದಿರಲಿ ಎಸಗಿರುವುದು ತಿಳಿದುಬಂದ ಸಂದರ್ಭದಲ್ಲಿ, ಮೊದಲ 15 ದಿನಗಳ ಅವಧಿಯು ಕೊನೆಗೊಂಡ ನಂತರವೂ ಪೊಲೀಸ್ ಅಭಿರಕ್ಷೆಯಲ್ಲಿ ಯಾವುದೇ ಬಂಧನಕ್ಕೊಳಗಾಗುವಂತಿಲ್ಲವೆಂದು ನಿರ್ಣಯಿಸಿದೆ."

8. ಸದರಿ ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣದ ಉಪಬಂಧಗಳನ್ನು ಪರಿಗಣಿಸಿ, ತರುವಾಯದ ಹಂತದಲ್ಲಿ ಒಂದೇ ವ್ಯವಹರಣೆಯಲ್ಲಿ ಆರೋಪಿಯು ಇನ್ನೂ ಹೆಚ್ಚಿನ ಅಪರಾಧಗಳನ್ನು, ಅವು ಗಂಭೀರವಾಗಿರಲಿ ಅಥವಾ ಇಲ್ಲದಿರಲಿ ಎಸಗಿರುವುದು ತಿಳಿದುಬಂದ ಸಂದರ್ಭದಲ್ಲಿ, ಮೊದಲ 15 ದಿನಗಳ ಅವಧಿಯು ಕೊನೆಗೊಂಡ ನಂತರವೂ ಪೊಲೀಸ್ ಅಭಿರಕ್ಷೆಯಲ್ಲಿ ಯಾವುದೇ ಬಂಧನಕ್ಕೊಳಗಾಗುವಂತಿಲ್ಲವೆಂದು ನಿರ್ಣಯಿಸಿದೆ.

9. ಹಾಗೆಯೇ, ***ಕೇಂದ್ರ ತನಿಖಾ ಸಂಸ್ಥೆ, ವಿಶೇಷ ತನಿಖಾ ಕೋಶ-I, ನವ ದೆಹಲಿ -ವಿರುದ್ಧ- ಅನುಪಮ್ ಜೆ. ಕುಲಕರ್ಣಿ*** (ಮೇಲಿನ) ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ತೀರ್ಪು ನೀಡಿದೆ:-

> "ಮೊದಲ ಹದಿನೈದು ದಿನಗಳ ಅವಧಿಯು ಕೊನೆಗೊಂಡ ನಂತರ, ತನಿಖಾ ಅವಧಿಯಲ್ಲಿ ಹೆಚ್ಚಿನ ಮರು-ವಿಚಾರಣೆಯನ್ನು ನ್ಯಾಯಿಕ ಅಭಿರಕ್ಷೆಯಲ್ಲಿ ಮಾತ್ರ ಕೈಗೊಳ್ಳಬಹುದಾಗಿದೆ. ಪೊಲೀಸ್ ಅಭಿರಕ್ಷೆ ಅವಶ್ಯವೆಂದು ಕಂಡುಬಂದರೆ, ಮೊದಲ ಹದಿನೈದು ದಿನಗಳ ಅವಧಿಯಲ್ಲಿ ಮಾತ್ರ ಆದೇಶಿಸಬಹುದಾಗಿದೆ. ಮೊದಲ ಹದಿನೈದು ದಿನಗಳ ಅವಧಿಯು ಕೊನೆಗೊಂಡ ನಂತರ ಹೆಚ್ಚಿನ ವಿಚಾರಣೆ ನಡೆಸುವ ಅವಶ್ಯಕತೆ ಇದ್ದರೆ, 90 ದಿನಗಳ ಅಥವಾ 60 ದಿನಗಳ ಕಾಲಾವಧಿಗಳಲ್ಲಿ ನ್ಯಾಯಿಕ ಅಭಿರಕ್ಷೆಯಲ್ಲಿರುವ ಆರೋಪಿಯನ್ನು ಪ್ರಶ್ನಿಸಲು ಯಾವುದೇ ನಿರ್ಬಂಧವಿರುವುದಿಲ್ಲ."

10. ಒಪ್ಪಿಕೊಂಡಿರುವಂತೆ, ಪ್ರಸ್ತುತ ಮೊಕದ್ದಮೆಯಲ್ಲಿ, ಅರ್ಜಿದಾರರನ್ನು ಪೊಲೀಸ್ ಅಧಿಕಾರಿಯು ಬಂಧಿಸಿರುವುದಿಲ್ಲ. ಇನ್ನೊಂದೆಡೆ, ಅವರು ಮಾನ್ಯ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ ಮುಂದೆ ಶರಣಾಗತರಾಗಿದ್ದಾರೆ ಮತ್ತು ಮಾನ್ಯ ಮ್ಯಾಜಿಸ್ಟ್ರೇಟರು ಅವರನ್ನು ನ್ಯಾಯಿಕ ಅಭಿರಕ್ಷೆಗೆ ತೆಗೆದುಕೊಂಡಿದ್ದಾರೆ

ಹಾಗೂ ದಿನಾಂಕ: 21.09.2013ರಂದು ಅವರನ್ನು ಪುನಃ ನ್ಯಾಯಿಕ ಅಭಿರಕ್ಷೆಗೆ ಕಳುಹಿಸಲಾಗಿದೆ. ಇದಲ್ಲದೆ, ಅರ್ಜಿದಾರರನ್ನು/ಆರೋಪಿ ಸಂಖ್ಯೆ: 5 ಮತ್ತು 7 ಇವರನ್ನು ಪೊಲೀಸ್ ಅಭಿರಕ್ಷೆಗೆ ಒಪ್ಪಿಸಲು ಪ್ರತ್ಯರ್ಜಿದಾರರು/ಪೊಲೀಸರು ಮಾನ್ಯ ಮ್ಯಾಜಿಸ್ಟ್ರೇಟರನ್ನು ಕೋರಿದ್ದಾರೆಂಬುದು ಇದರಿಂದ ತಿಳಿದುಬರುತ್ತದೆ. ಆ ತರುವಾಯ, ಈ ಅರ್ಜಿದಾರರನ್ನು ದಿನಾಂಕ: 28.10.2013ರಂದು ನ್ಯಾಯಿಕ ಅಭಿರಕ್ಷೆಯಿಂದ ಪಡೆಯಲಾಗಿದ್ದು, ಅವರನ್ನು ದಿನಾಂಕ: 30.10.2013ರವರೆಗೆ ಪೊಲೀಸ್ ಅಭಿರಕ್ಷೆಗೆ ಕಳುಹಿಸಲಾಗಿದೆ.

11. ಮೊದಲು ವಶಕ್ಕೆ ಒಪ್ಪಿಸಿದ 15 ದಿನಗಳ ಅವಧಿಯು ಕೊನೆಗೊಂಡ ನಂತರ, ಪೊಲೀಸ್ ಅಭಿರಕ್ಷೆಗೆ ಆರೋಪಿಯನ್ನು ವಶಪಡಿಸುವುದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣದ ಅಡಿಯಲ್ಲಿ ಯಾವುದೇ ನಿರ್ಬಂಧವಿಲ್ಲವೆಂದು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು ನಿವೇದಿಸಿಕೊಂಡಿದ್ದಾರೆ. ಆದುದರಿಂದ, ಈ ಕಾನೂನಿನ ವಿರುದ್ಧವಾಗಿ ಯಾವುದೇ ನಿರ್ಣಯವನ್ನು ಪರಿಗಣಿಸಲಾಗುವುದಿಲ್ಲ.

12. ***ಬುಧ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ*** (ಮೇಲಿನ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣದ ಅಡಿಯಲ್ಲಿ ಮೊಕದ್ದಮೆಯನ್ನು ಪರಿಗಣಿಸಿತು. ಸದರಿ ನಿರ್ಣಯದಲ್ಲಿನ ಸಂಗತಿಗಳು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಸದೃಶವಾಗಿದ್ದವು. ಆ ಮೊಕದ್ದಮೆಯಲ್ಲಿ, ಆಪಾದಿತನು ಮಾನ್ಯ ಪ್ರಥಮ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟರ ಮುಂದೆ ಶರಣಾಗಿದ್ದನು ಮತ್ತು ಆತನನ್ನು ನ್ಯಾಯಿಕ ಅಭಿರಕ್ಷೆಗೆ ಒಪ್ಪಿಸಲಾಗಿತ್ತು. ತರುವಾಯ, ನ್ಯಾಯಿಕ ಅಭಿರಕ್ಷೆಯಲ್ಲಿರುವಾಗ, ದಿನಾಂಕ: 23.12.1999ರ ಆದೇಶದ ಮೂಲಕ ವಿಷಯವನ್ನು ತನಿಖಾ ಏಜನ್ಸಿಯ ಮನವಿಯ ಮೇರೆಗೆ ದಿನಾಂಕ: 02–01–2000ದವರೆಗೆ ಮುಂದೂಡಲಾಯಿತು. ಆ ಮೊಕದ್ದಮೆಯ ಅಪೀಲುದಾರನನ್ನು ಪುನಃ 02.01.2000ರವರೆಗೆ ನ್ಯಾಯಿಕ ಅಭಿರಕ್ಷೆಗೆ ಒಪ್ಪಿಸಲಾಯಿತು. ದಿನಾಂಕ: 02.01.2000ರಂದು ತನಿಖಾ ಏಜನ್ಸಿಯ ಮನವಿಯ

ಮೇರೆಗೆ ಅಪೀಲುದಾರನನ್ನು ಪೊಲೀಸರಿಗೆ ಒಪ್ಪಿಸಲು ಅನುಮತಿ ನೀಡಲಾಯಿತು, ಒಂದು ದಿನದ ಪೊಲೀಸ್ ವಶಕ್ಕೆ ನ್ಯಾಯಾಲಯವು ಅನುಮತಿ ನೀಡಿತು ಮತ್ತು ಪೊಲೀಸ್ ವಶಕ್ಕೆ ನೀಡುವುದನ್ನು 03.01.2000ದವರೆಗೆ ಒಂದು ದಿನಕ್ಕೆ ಮತ್ತಷ್ಟು ವಿಸ್ತರಿಸಲಾಯಿತು. ತನಿಖಾಧಿಕಾರಿಯು 04.01.2000ದಂದು, ಏಳು ದಿನಗಳ ಹೆಚ್ಚಿನ ಅವಧಿಗಾಗಿ ಅಪೀಲುದಾರನನ್ನು ಪೊಲೀಸ್ ವಶಕ್ಕೆ ನೀಡುವುದನ್ನು ಕೋರಿ ಮತ್ತೊಂದು ಅರ್ಜಿಯನ್ನು ಸಲ್ಲಿಸಿದರು. ಮಾನ್ಯ ಪ್ರಥಮ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟರ್, ಲುಧಿಯಾನ ಇವರು ಅಪೀಲುದಾರನನ್ನು ಹೆಚ್ಚಿನ ಅವಧಿಗಾಗಿ ಪೊಲೀಸ್ ವಶಕ್ಕೆ ನೀಡುವ ಸಂಬಂಧದಲ್ಲಿನ ಪೊಲೀಸರ ಮನವಿಯನ್ನು ನಿರಾಕರಿಸಿ, 18.01.2000ರವರೆಗೆ ಆತನನ್ನು ನ್ಯಾಯಿಕ ಅಭಿರಕ್ಷೆಗಾಗಿ ವಶಕ್ಕೆ ನೀಡಿದರು. ಮಾನ್ಯ ಸತ್ರ ನ್ಯಾಯಾಧೀಶರು, ಲುಧಿಯಾನ ಇವರ ಮುಂದೆ ಪುನರ್‌ಪರಿಷ್ಕರಣೆ ಅರ್ಜಿಯಲ್ಲಿ ಈ ಆದೇಶವನ್ನು ರಾಜ್ಯವು ಪ್ರಶ್ನಿಸಿತು. ಆ ತರುವಾಯ, ರಾಜ್ಯವು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿತು; ಅದರಲ್ಲಿ, ಉಚ್ಚ ನ್ಯಾಯಾಲಯವು, ಏಳು ದಿನಗಳ ಹೆಚ್ಚಿನ ಅವಧಿಗಾಗಿ ಅಪೀಲುದಾರನನ್ನು ಪೊಲೀಸ್ ವಶಕ್ಕೆ ನೀಡಲು ಪ್ರಥಮ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟ್, ಲುಧಿಯಾನ ಇವರಿಗೆ ನಿರ್ದೇಶಿಸಿತು. ಈ ಆದೇಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಯಿತು. ಆ ಸಂದರ್ಭಗಳ ಮೇರೆಗೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅದರ ಆದೇಶದ ಕಂಡಿಕೆ ಸಂಖ್ಯೆ 5ರಲ್ಲಿ ಈ ಮುಂದಿನಂತೆ ನಿರ್ಣಯಿಸಿದೆ:

> "5. ಸಂಗತಿಗಳು ಹೀಗಿದ್ದಾಗ್ಯೂ, ಮೇಲೆ ಗಮನಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಮಾನ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟರ ದಿನಾಂಕ: 4.1.2000ದ ಆದೇಶದಲ್ಲಿ ಯಾವುದೇ ಹಸ್ತಕ್ಷೇಪದ ಅಗತ್ಯವಿಲ್ಲ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973ರ 167ನೇ ಪ್ರಕರಣದಲ್ಲಿನ ಕರಾರಿನಂತೆ, ಆಪಾದಿತನಿಗೆ ಸಂಬಂಧಪಟ್ಟಿರುವಷ್ಟರಮಟ್ಟಿಗೆ, ಮೊದಲ 15 ದಿನಗಳ ಅವಧಿಯು ಕೊನೆಗೊಂಡ ನಂತರ, ಪೊಲೀಸ್ ಅಭಿರಕ್ಷೆಯಲ್ಲಿ ಯಾವುದೇ ಬಂಧನವು ಸಾಧ್ಯವಿಲ್ಲವೆಂದು

ಸಾಧಿತವಾಗುತ್ತದೆ. ಈ ಮೊಕದ್ದಮೆಯಲ್ಲಿ, 15 ದಿನಗಳ ಆ ಅವಧಿಯು ಒಪ್ಪಿಕೊಂಡಿರುವಂತೆ ದಿನಾಂಕ: 4.1.2000ರಂದು ಕೊನೆಗೊಳ್ಳುತ್ತದೆ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣದಲ್ಲಿ ಇರುವ ಶಾಸನಾತ್ಮಕ ಉಪಬಂಧವು, ಮೊದಲ ಹದಿನೈದು ದಿನಗಳ ಅವಧಿಯು ಕೊನೆಗೊಂಡ ನಂತರ ಏಳು ದಿನಗಳ ಅವಧಿಗೆ ಪೊಲೀಸ್ ಬಂಧನಕ್ಕೆ ಅಧಿಕಾರ ನೀಡುತ್ತದೆಯಾದ್ದರಿಂದ, ಉಚ್ಚ ನ್ಯಾಯಾಲಯದ ಪ್ರಶ್ನಿತ ಆದೇಶವು ಅದರ ಉಲ್ಲಂಘನೆಯಾಗಿದೆ. ಸಿ.ಬಿ.ಐ. ವಿಶೇಷ ತನಿಖಾ ಕೋಶ–I, ನವ ದೆಹಲಿ –ವಿರುದ್ಧ– ಅನುಪಮ್ ಜೆ. ಕುಲಕರ್ಣಿ (ಜೆಟಿ 1992 (3) ಎಸ್‌ಸಿ 366 = 1992 (3) ಎಸ್‌ಸಿಸಿ 141) ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣದ ಪರಿಧಿ ಮತ್ತು ವ್ಯಾಪ್ತಿಯನ್ನು ಪರಿಗಣಿಸಿ, ತರುವಾಯದ ಹಂತದಲ್ಲಿ ಅದೇ ವ್ಯವಹರಣೆಯಲ್ಲಿ ಆರೋಪಿಯು ಎಸಗಿದ ಗಂಭೀರ ಅಥವಾ ಅನ್ಯಥಾ ಇನ್ನೂ ಹೆಚ್ಚಿನ ಅಪರಾಧಗಳು ಗಮನಕ್ಕೆ ಬಂದ ಸಂದರ್ಭದಲ್ಲಿಯೂ ಸಹ, ಮೊದಲ 15 ದಿನಗಳ ಅವಧಿಯು ಕೊನೆಗೊಂಡ ನಂತರ ಪೊಲೀಸ್ ಅಭಿರಕ್ಷೆಯಲ್ಲಿ ಯಾವುದೇ ಬಂಧನವಿರುವುದಿಲ್ಲವೆಂದು ನಿರ್ಣಯಿಸಿದೆ. ಆದಾಗ್ಯೂ ಪೀಠವು, ಕೆಲವು ದಸ್ತಗಿರಿಯಾದ ಆಪಾದಿತರು ಬೇರೆ ವ್ಯವಹರಣೆಯಿಂದ ಉದ್ಭವಿಸಿದ ಕೆಲವು ಇತರ ಅಥವಾ ಬೇರೆ ಮೊಕದ್ದಮೆಯಲ್ಲಿ ತೊಡಗಿಕೊಂಡಿದ್ದರೆ, ಈ ನಿರ್ಬಂಧವು ಅನ್ವಯವಾಗುವುದಿಲ್ಲವೆಂದು, ಅಂಥ ಸಂದರ್ಭದಲ್ಲಿ ವಶಕ್ಕೆ ಒಪ್ಪಿಸುವ ಅವಧಿಯನ್ನು ಅಂಥ ಪ್ರತಿಯೊಂದು ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಪರಿಗಣಿಸಬೇಕಾದ ಅಗತ್ಯವಿರುತ್ತದೆ ಎಂದು ಸ್ಪಷ್ಟಪಡಿಸಿದೆ. ಅಂಥ ಸಂದರ್ಭಗಳ ಅಡಿಯಲ್ಲಿ ಉಚ್ಚ

ನ್ಯಾಯಾಲಯದ ಪ್ರಶ್ನಿತ ಆದೇಶವನ್ನು ಸಮರ್ಥಿಸಲಾಗುವುದಿಲ್ಲ. ತದನುಸಾರವಾಗಿ, ಉಚ್ಚ ನ್ಯಾಯಾಲಯವು ನೀಡಿರುವ ಏಳು ದಿನಗಳ ಅವಧಿಗೆ ಪೊಲಿಸ್ ವಶಕ್ಕೆ ನೀಡುವ ನಿರ್ದೇಶನವನ್ನು ತಳ್ಳಿಹಾಕಲಾಗಿದೆ. ಆದುದರಿಂದ ಅಪೀಲು ಯಶಸ್ವಿಯಾಗಿದ್ದು, ಮೇಲೆ ಸೂಚಿಸಿದ ವ್ಯಾಪ್ತಿವರೆಗೆ ಅನುಮತಿಸಲಾಗಿದೆ."

13. ಆದುದರಿಂದ, ಆ ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದಿನಾಂಕ: 04.01.2000ರ ಮಾನ್ಯ ಪ್ರಥಮ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟರ ಆದೇಶದಲ್ಲಿ ಯಾವುದೇ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲವೆಂದು ಅಭಿಪ್ರಾಯಪಟ್ಟಿದೆ. ಆಪಾದಿತನಿಗೆ ಸಂಬಂಧಪಡುವಷ್ಟರಮಟ್ಟಿಗೆ, ಮೊದಲ 15 ದಿನಗಳ ಅವಧಿಯು ಕೊನೆಗೊಂಡ ನಂತರ, ಪೋಲೀಸ್ ಅಭಿರಕ್ಷೆಯಲ್ಲಿ ಯಾವುದೇ ಬಂಧನವು ಸಾಧ್ಯವಿಲ್ಲವೆಂಬುದು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ, 1979ರ 167ನೇ ಪ್ರಕರಣದ ಕರಾರಾಗಿದೆ. ಆ ಮೊಕದ್ದಮೆಯಲ್ಲಿ 15 ದಿನಗಳ ಅವಧಿಯು ಒಪ್ಪಿಕೊಂಡಿರುವಂತೆ ದಿನಾಂಕ: 04.01.2000ರಂದು ಕೊನೆಗೊಂಡಿದೆ. ಆದುದರಿಂದ, ಆ ಮೊಕದ್ದಮೆಯಲ್ಲಿನ ಆಪಾದಿತನು 15 ದಿನಗಳ ಅವಧಿಗೆ ನ್ಯಾಯಿಕ ಅಭಿರಕ್ಷೆಯಲ್ಲಿದ್ದನು ಮತ್ತು ಸದರಿ ಅವಧಿಯು ದಿನಾಂಕ: 04.01.2000ರಂದು ಕೊನೆಗೊಂಡಿದೆ ಎಂಬುದು ಅತ್ಯಂತ ಸ್ಪಷ್ಟವಾಗಿದೆ. ಆ ಸಂದರ್ಭಗಳ ಮೇರೆಗೆ, 15 ದಿನಗಳ ಸದರಿ ಅವಧಿಯು ಕೊನೆಗೊಂಡ ನಂತರ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣದಲ್ಲಿ ಇರುವ ಶಾಸನಾತ್ಮಕ ಉಪಬಂಧಗಳ ಉಲ್ಲಂಘನೆಯಾಗಿರುವ ಪೊಲೀಸ್ ಅಭಿರಕ್ಷೆಗೆ ಆಪಾದಿತನನ್ನು ವಶಪಡಿಸಲಾಗುವುದಿಲ್ಲವೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದೆ. ಆದುದರಿಂದ, ಇದೇ ತತ್ವವನ್ನು ಪ್ರಸ್ತುತ ಮೊಕದ್ದಮೆಗೆ ಅನ್ವಯಿಸಲಾಗಿದೆ.

14. ಒಪ್ಪಿಕೊಂಡಿರುವಂತೆ, ಇದರಲ್ಲಿನ ಅರ್ಜಿದಾರರು/ಆಪಾದಿತರು, ದಿನಾಂಕ: 21.09.2013ರಂದು ಮಾನ್ಯ ಮ್ಯಾಜಿಸ್ಟ್ರೇಟರ ಮುಂದೆ ಶರಣಾಗಿದ್ದಾರೆ ಮತ್ತು

ಅವರನ್ನು ನ್ಯಾಯಿಕ ಅಭಿರಕ್ಷೆಯಲ್ಲಿ ಇರಿಸಲಾಗಿತ್ತು. ಆ ತರುವಾಯ, ಪ್ರತ್ಯರ್ಜಿದಾರ–ಪೋಲೀಸರ ಮನವಿಯ ಮೇರೆಗೆ ಈ ಅರ್ಜಿದಾರರನ್ನು, 30 ದಿನಗಳಿಗಿಂತ ಹೆಚ್ಚಿನ ಅವಧಿ ಕೊನೆಗೊಂಡ ನಂತರ ದಿನಾಂಕ: 28.10.2013ರಂದು ಮಾನ್ಯ ಮ್ಯಾಜಿಸ್ಟ್ರೇಟರ ಮುಂದೆ ವಶಕ್ಕೆ ಪಡೆಯಲಾಗಿತ್ತು ಮತ್ತು ಅವರನ್ನು ಮೂರು ದಿನಗಳ ಅವಧಿಗಾಗಿ ದಿನಾಂಕ: 28.10.2013ರಂದು ಪೋಲೀಸ್ ಅಭಿರಕ್ಷೆಗೆ ಒಪ್ಪಿಸಲಾಗಿತ್ತು. ಈ ಆದೇಶವನ್ನು ಈ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

15. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲೆ ಉಲ್ಲೇಖಿಸಿದ ನಿರ್ಣಯದ ಹಿನ್ನಲೆಯಲ್ಲಿ, ನ್ಯಾಯಿಕ ಅಭಿರಕ್ಷೆಯಲ್ಲಿ ಅರ್ಜಿದಾರರ ಬಂಧನದ 15 ದಿನಗಳ ಅವಧಿಯು ಕೊನೆಗೊಂಡ ನಂತರ, ಅವರನ್ನು ಪೋಲೀಸ್ ಅಭಿರಕ್ಷೆಗೆ ಒಪ್ಪಿಸಿ ಹೊರಡಿಸಿದ ದಿನಾಂಕ: 28.10.2013ರ ಪ್ರಶ್ನಿತ ಆದೇಶವು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣದಲ್ಲಿ ಇರುವ ಶಾಸನಾತ್ಮಕ ಉಪಬಂಧಗಳ ಉಲ್ಲಂಘನೆಯಾಗಿದೆ ಎಂಬುದು ಅತ್ಯಂತ ಸ್ಪಷ್ಟವಾಗಿದೆ.

16. ದಿನಾಂಕ: 28.10.2013ರ ಆದೇಶವನ್ನು ಈ ಅರ್ಜಿಯಲ್ಲಿ ರದ್ದುಗೊಳಿಸಬೇಕೆಂದು ಕೋರಲಾಗಿದೆ ಮತ್ತು ಹಾಗಾಗಿ ಈಗ ಇದು ನಿರರ್ಥಕವಾಗಿದೆ ಮತ್ತು ಸದರಿ ಆದೇಶವನ್ನು ರದ್ದುಗೊಳಿಸುವುದರಲ್ಲಿ ಯಾವುದೇ ಅರ್ಥವಿಲ್ಲವೆಂದು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು ನಿವೇದಿಸಿಕೊಂಡಿದ್ದಾರೆ.

17. ಅರ್ಜಿದಾರರು ಇದರಿಂದ ಯಾವುದೇ ಪ್ರಯೋಜನವನ್ನು ಪಡೆಯುವುದಿಲ್ಲವಾದರೂ, ಇದು ಕಾನೂನಿನ ಪ್ರಶ್ನೆಯಾಗಿರುವುದರಿಂದ ಅದನ್ನು ನಿರ್ಧರಿಸುವುದು ಈ ನ್ಯಾಯಾಲಯಕ್ಕೆ ಅಗತ್ಯವಾಗಿದೆ ಎಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದರೆ. ಈ ಸಂದರ್ಭಗಳ ಮೇರೆಗೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲೆ ಉಲ್ಲೇಖಿಸಿದ ನಿರ್ಣಯದ ಹಿನ್ನಲೆಯಲ್ಲಿ, ಪ್ರಶ್ನಿತ ಆದೇಶವು ಕಾನೂನುಬಾಹಿರವಾದುದಾಗಿದೆ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣದ ಉಲ್ಲಂಘನೆಯಾಗಿದೆ ಎಂದು ನಿರ್ಣಯಿಸುವುದನ್ನು

ಹೊರತುಪಡಿಸಿ ಬೇರೆ ದಾರಿ ಇರುವುದಿಲ್ಲ, ಹಾಗಾಗಿ ಇದು ರದ್ದುಗೊಳ್ಳುವುದಕ್ಕೆ ಗುರಿಯಾಗುತ್ತದೆ.

18. ತದನುಸಾರವಾಗಿ, ಅರ್ಜಿಗೆ ಅನುಮತಿ ನೀಡಲಾಗಿದೆ ಮತ್ತು ಬೆಂಗಳೂರಿನ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ ಕಡತದಲ್ಲಿ, ಸಂಪಿಗೆ ಹಳ್ಳಿ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 280/2013ರ ಸಂಬಂಧದಲ್ಲಿ ಹೊರಡಿಸಿದ ದಿನಾಂಕ: 28.10.2013ರ ಪ್ರಶ್ನಿತ ಆದೇಶವನ್ನು ಈ ಮೂಲಕ ರದ್ದುಗೊಳಿಸಲಾಗಿದೆ.